# ಗಜ ಜಲಪಾತ

ಮೇಘಾಲಯದ ರಾಜಧಾನಿ ಶಿಲ್ಲಾಂಗ್‌ನ ಸುತ್ತಮುತ್ತ ನೂರಾರು ನಯನ ಮನೋಹರ ಜಲಪಾತಗಳಿವೆ. ಪ್ರವಾಸಿ ಕೇಂದ್ರವಾದ ಶಿಲ್ಲಾಂಗ್‌ನಿಂದ 13 ಕಿ.ಮೀ. ದೂರದಲ್ಲಿರುವ ಸುಂದರ ಜಲಪಾತವಿದು. ಎಲಿಫೆಂಟ್ ಫಾಲ್ಸ್ ಅಥವಾ ಗಜ ಜಲಪಾತವನ್ನು ಸ್ಥಳೀಯರು ಮೂರು ಹಂತದ ಜಲಪಾತ ಎಂದೇ ಕರೆಯುತ್ತಿದ್ದರು.

ಜಲಪಾತದ ಎಡಪಾರ್ಶ್ವದಲ್ಲಿ ಒಂದು ಬಂಡೆ ಆನೆಯಾಕೃತಿಯಂತೆ ಇತ್ತು. ಆದ್ದರಿಂದ ಬ್ರಿಟಿಷರು ಈ ಜಲಪಾತಕ್ಕೆ ಎಲಿಫೆಂಟ್ ಫಾಲ್ಸ್ ಎಂದೇ ಹೆಸರಿಟ್ಟರು. ಆದರೆ 1897 ರಲ್ಲಿ ಜರುಗಿದ ಭೂಕಂಪದಿಂದ ಆ ಗಜಾಕೃತಿಯ ಬಂಡೆ ನಾಶವಾಯಿತು. ಆದರೂ ಹೆಸರು ಮಾತ್ರ ಹಾಗೆಯೇ ಉಳಿದಿದೆ.

**- ಮ.ಗು.ಬಸವಣ್ಣ, ನಂಜನಗೂಡು**





# ಉಡುದಟ್ಟೆ, ಉಡುಕಿರಿಗೆ..

ಹಲವು ಶಾಸ್ತ್ರ, ಸಂಪ್ರದಾಯಗಳಿಂದ ಉತ್ತರ ಕರ್ನಾಟಕದ ಜನರ ಬದುಕು ಶ್ರೀಮಂತಗೊಂಡಿದೆ. ಉಡುದಟ್ಟೆ, ಉಡುಕಿರಿಗೆ,ಉಡುಜರಿ ಎಂದೆಲ್ಲಾ ಕರೆಯುವ ಈ ಶಾಸ್ತ್ರವೂ ಅದರಲ್ಲೊಂದು. ಹೆಣ್ಣು ಮಗುವಿಗೆ ಮೊಟ್ಟಮೊದಲಿಗೆ ಸೀರೆ ಉಡಿಸಿ ಸಂಭ್ರಮಿಸುವ 'ಉಡುದಟ್ಟೆ' ಯು ಸಾಮಾನ್ಯವಾಗಿ ಎಲ್ಲಾ ಜನಾಂಗಗಳಲ್ಲೂ ಕಂಡು ಬರುತ್ತದೆ. ಮಗಳ ಮಗಳಿಗೆ ನಾಲ್ಕು ವರ್ಷದ ಮೇಲ್ಪಟ್ಟು 8-10 ವರ್ಷದವರೆಗೂ ಯಾವಾಗ ಬೇಕಾದರೂ ತವರಿನವರು ಮಾಡುವ ಶಾಸ್ತ್ರವಿದು. ಅಜ್ಜಿ, ಸೋದರಮಾವ ವಿವಿಧ ಬಗೆಯ ತಿಂಡಿ, ಸೀರೆ ಕುಪ್ಪುಸಗಳೊಂದಿಗೆ ಬರುತ್ತಾರೆ ಅಥವಾ ತಮ್ಮ ಮನೆಗೇ ಕರೆಸುತ್ತಾರೆ. ನಂತರ ಬಂಧು-ಮಿತ್ರರೊಂದಿಗೆ ಹೋಳಿಗೆ ಊಟ ಮಾಡುವ ಸಂಪ್ರದಾಯವಿದು.

ಅಂದು ಮಗುವಿಗೆ ಸೀರೆ ಉಡಿಸಿ ದೇವಾಲಯಕ್ಕೆ ಕರೆದುಕೊಂಡು ಹೋಗುತ್ತಾರೆ. ನಂತರ ಮನೆಯಲ್ಲಿ ಉಡುಗೊರೆಗಳನ್ನು ಕೊಟ್ಟು ಆರತಿ ಮಾಡಿ ಎಲ್ಲರೂ ಶುಭ ಹಾರೈಸುತ್ತಾರೆ. ಆ ನಂತರವಷ್ಟೇ ಸೀರೆ ಉಡಿಸಬೇಕು. ಅದಕ್ಕೆ ಮುಂಚೆ ಉಡಿಸಬಾರದೆಂಬ ನಿಯಮವಿದೆ. ಬಹುಶಃ ಹಿಂದೆ ಬಾಲ್ಯವಿವಾಹ ಮಾಡುತ್ತಿದ್ದ ಕಾಲದಲ್ಲಿ ಕನ್ಯೆ ನಮ್ಮದೆಂದು ನಿಶ್ಚಯ ಮಾಡಿಕೊಳ್ಳಲೂ ಈ ಸಂಪ್ರದಾಯ ಬೆಳೆದು ಬಂದಿರಬಹುದು.

**-ಸೀತಾ ಎಸ್.ಎನ್., ಹರಿಹರ**

# ವಿವೇಕಾನಂದರ ಕೊಲಾಜ್

ಇತ್ತೀಚೆಗೆ ಮಂಗಳೂರಿನ ಕೇಂದ್ರ ಮೈದಾನದಲ್ಲಿ ಯುವ ಬ್ರಿಗೇಡ್ ನೇತೃತ್ವದಲ್ಲಿ ಜರುಗಿದ ಸ್ವಾಮಿ ವಿವೇಕಾನಂದ- ಅಕ್ಕ ನಿವೇದಿತಾ ಸಾಹಿತ್ಯ ಸಮ್ಮೇಳನದಲ್ಲಿ ಪ್ರದರ್ಶಿಸಲಾದ ಚಿತ್ರವಿದು. ಜಾಗತಿಕ ದಾಖಲೆಯ ಸ್ವಾಮಿ ವಿವೇಕಾನಂದರ ಕೊಲಾಜ್ ಚಿತ್ರವನ್ನು ಮಂಗಳೂರು ತಾಲೂಕಿನ ಪಂಜಿನಡ್ಕ ಗ್ರಾಮದ ಕೆ.ಪಿ.ಎಸ್.ಕೆ ಸ್ಮಾರಕ ಪ್ರೌಢಶಾಲೆಯ ವಿದ್ಯಾರ್ಥಿಗಳು ರಚಿಸಿದ್ದಾರೆ. ಈ ಚಿತ್ರ 4.57 ಮೀ. ಅಗಲ, 6.096 ಮೀ. ಎತ್ತರವಿದ್ದು, 120 ಚಾರ್ಟ್ ಶೀಟ್, 10 ಕೆ.ಜಿ. ಫೆವಿಕಾಲ್ ಹಾಗೂ ಹಳೆಯ ನಿಯತಕಾಲಿಕಗಳನ್ನು ಉಪಯೋಗಿಸಿ ತಯಾರಿಸಲಾಗಿದೆ.

**- ಜಿ.ನಾಗೇಂದ್ರ, ಮಂಗಳೂರು**

